ಶ್ರೀ ಎಂ.ಎಸ್. ಆತ್ಮಾನಂದ(ಮಂಡ್ಯ): ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ 30-35 ದಿವಸದ ಒಳಗಾಗಿ ಪಾವತಿಸುವ ಕಾರ್ಯಕ್ರಮ ಹಾಕಿಕೊಂಡು ಪ್ರಾರಂಭಿಸಲಾಗುತ್ತದೆ ಎಂದು ಹೇಳಿದ್ದಾರೆ. ನಮ್ಮ ರೈತರಿಗೆ ಆದಷ್ಟು ಬೇಗ ಆರ್ಥಿಕ ನೆರವನ್ನು ನೀಡಿ ಹಣವನ್ನು ಪಾವತಿ ಮಾಡುವಂತಹ ಕ್ರಮವನ್ನು ತೆಗೆದುಕೊಳ್ಳಬೇಕು. ಏಕೆಂದರೆ ರೈತರು ಸಾಲದ ಹಣವನ್ನು ನೀಡಬೇಕಾಗಿರುತ್ತದೆ.

ಶ್ರೀ ಎ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ನಮ್ಮ ಮಿತ್ರರಿಗೆ ಎಲ್ಲಾ ವಿಚಾರಗಳು ಗೊತ್ತು. ನಾವು ಬೇರೆ ಕಾರ್ಖಾನೆಗಳಿಗೆ ಹೋಲಿಕೆ ಮಾಡಿ ನೋಡಿದಾಗ ಈ ಮೈಸೂರು ಸಕ್ಕರೆ ಕಾರ್ಖಾನೆಯವರು ಅದೃಷ್ಟಶಾಲಿಗಳು. 13 ರಿಂದ 14 ಕೋಟಿ ರೂಪಾಯಿಯಷ್ಟು ಕಬ್ಬು ಎಕ್ಸ್‌ಪೋರ್ಟ್ ಮಾಡುವುದಕ್ಕೆ ಅವಕಾಶ ಸಿಕ್ಕಿತ್ತು. ಇಲ್ಲದೆ ಇದ್ದರೆ ಕಷ್ಟವಾಗುತ್ತಿತ್ತು. ಈ ವರ್ಷದ ಜೂನ್ ಅಂತ್ಯದೊಳಗೆ ರೈತರಿಗೆ ಬಾಕಿ ಎಷ್ಟಿದೆಯೋ ಅಷ್ಟು ಪಾವತಿ ಮಾಡುತ್ತೇವೆಂದು ಹೇಳುತ್ತೇನೆ.

ವಿಷಯ: (ಊ) ಕರ್ನಾಟಕ ರಾಜ್ಯದ ಮಹಾನಗರ ಪಾಲಿಕೆ ನೌಕರರನ್ನು ಪರಸ್ಪರ ವರ್ಗಾವಣೆ ಕುರಿತು ಕೋರಿರುವ ವಿಚಾರ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ(ಸುರತ್ಕಲ್): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಮಹಾನಗರ ಪಾಲಿಕೆ ನೌಕರರನ್ನು ಪರಸ್ಪರ ವರ್ಗಾವಣೆ ಕುರಿತು ಕೋರಿರುವ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ(ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆಯನ್ನು ಕೋರಿ ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಕಲಂ 91-ಎ ಪ್ರಕಾರ ಮಹಾನಗರ ಪಾಲಿಕೆಯ ಅಧಿಕಾರಿಗಳು ಅಥವಾ ನೌಕರರನ್ನು ಇತರೆ ನಗರ ಪಾಲಿಕೆ ಅಥವಾ ಸ್ಥಳೀಯ ಸಂಸ್ಥೆಗಳಿಗೆ ಸರಿಸಮನಾದ ಹುದ್ದೆಗೆ ವರ್ಗಾಯಿಸಲು ಸರ್ಕಾರಕ್ಕಿರುವ ಅಧಿಕಾರವನ್ನು ಪ್ರಶ್ನಿಸಿ ಉಚ್ಚ-ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಾಗಿದ್ದು, ಈ ಬಗ್ಗೆ ಉಚ್ಚ-ನ್ಯಾಯಾಲಯವು ಎಲ್ಲಾ ಮಹಾನಗರ ಪಾಲಿಕೆಗಳಿಗೆ ಸಂಬಂಧಿಸಿದಂತೆ, ಸಾಮಾನ್ಯವಾದ ಒಂದು ವೃಂದ ಕೇಂದ್ರಿಯ ಸೇವೆಯನ್ನು ಜಾರಿಗೆ ತರುವವರೆಗೆ ಕರ್ನಾಟಕ ಮಹಾನಗರ ಪಾಲಿಕೆ ಅಧಿನಿಯಮ 1976ರ ಕಲಂ 91-ಎ ಜಾರಿ ಮಾಡಬಾರದೆಂದು ಆದೇಶಿಸಿದೆ. ಆದ್ದರಿಂದ, ನಗರ ಪಾಲಿಕೆಗಳ ಎಲ್ಲಾ ವಿವಿಧ ಹುದ್ದೆಗಳಿಗೆ ಸಂಬಂಧಿಸಿದಂತೆ ಒಂದು ಏಕರೂಪದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಅವಶ್ಯಕತೆ ಇದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 148 ಬಿಎಂಎಸ್ 99 ದಿನಾಂಕ: 29-12-99ರ ಆದೇಶದಲ್ಲಿ ಮಹಾನಗರ ಪಾಲಿಕೆಗಳ ಹಾಗೂ ಇತರೆ ಸ್ಥಳೀಯ ಸಂಸ್ಥೆಗಳ ನೌಕರರುಗಳನ್ನು ವರ್ಗಾವಣೆ ಮಾಡಲು ಪ್ರಸ್ತುತ ಇರುವ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಸಲಹೆ ಸೂಚನೆಗಳನ್ನೊಳಗೊಂಡ ವರದಿ ನೀಡಲು ಪೌರಾಡಳಿತ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಉಪ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ.

ಮಹಾನಗರ ಪಾಲಿಕೆ ನೌಕರರ ಸಮಗ್ರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಹೊರಡಿಸುವ ಸಲುವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆಯೊಂದಿಗೆ ಸಂಪರ್ಕಿಸಿ ಪರಿಶೀಲಿಸಲಾಗುತ್ತಿದೆ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ಪರಸ್ಪರ ವರ್ಗಾವಣೆ ಆಗುತ್ತದೆ ಎಂದು ಹೇಳಿದ್ದರು. ಆದರೆ ಈ ವಿಚಾರದಲ್ಲಿ ಕೋರ್ಟ್‌ಗೆ ಹೋಗಿದ್ದಾರೆ. ತಾವು ನಿರ್ದಿಷ್ಟವಾಗಿ ಯಾವಾಗ ಮಾಡುತ್ತೀರೆಂದು ದಿನವನ್ನು ನಿಗದಿ ಪಡಿಸಬೇಕು. ಈ ಮಹಾನಗರ ಪಾಲಿಕೆಗಳು ಆರ್‌ಟಿಒ ಆಫೀಸ್‌ಗಳು ಯಾವರೀತಿ ಇವೆ, ಆ ರೀತಿ ಲಂಚದ ಆಫೀಸ್ ಆಗಿವೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅವುಗಳು ಅಷ್ಟು ಮಸ್ಟ್ ಆಗಿವೆ. ಎಲ್ಲಾ ಮಹಾನಗರ ಪಾಲಿಕೆಗಳು ಇದೇ ರೀತಿ ಇವೆ ಎಂದು ನನ್ನ ಅನಿಸಿಕೆ. ಅದಕ್ಕೆ ಮಹಾರಾಷ್ಟ್ರದಲ್ಲಿದಂತೆ ಒಬ್ಬರು ಟೈರುನಾರ್ ಅಂತಹವರನ್ನು ನಮ್ಮ ಎಲ್ಲಾ ಮಹಾನಗರ ಪಾಲಿಕೆಗಳಿಗೆ ನೇಮಿಸಿದರೆ ಸರಿ ಹೋಗುತ್ತದೆ. ಆ ಮಹಾನಗರ ಪಾಲಿಕೆಗಳಲ್ಲಿ ಯಾವುದಾದರೂ ಒಂದು ಕೆಲಸಕ್ಕೆ ಒಂದು ಲಕ್ಷ ರೂಪಾಯಿ ಎಸ್ಟಿಮೇಟ್ ಮಾಡಿದರೆ ಅದರಲ್ಲಿ 30 ರಿಂದ 50 ಲಕ್ಷ ರೂಪಾಯಿಗಳವರೆಗೆ ಮಾತ್ರ ಖರ್ಚಾಗುತ್ತದೆ. ಅಲ್ಲಿ ಹಲವಾರು ವರ್ಷಗಳಿಂದ ನೌಕರರು ಬೇರೂರುವುದರಿಂದ ವರ್ಗಾವಣೆ ಇಲ್ಲದೆ ಇರುವುದರಿಂದ ಈ ರೀತಿಯ ತೊಂದರೆಯಾಗುತ್ತಿದೆ. ಅದಕ್ಕೆ ನಿವಾರಣೆ ಹೇಗೆ? ಒಂದು ವರ್ಷದ ಮೊದಲು ಮೀಟಿಂಗ್ ಕರೆದಿದ್ದರು. ಅವರ ಬಗ್ಗೆ ಆಕ್ಷನ್ ತೆಗೆದುಕೊಳ್ಳುತ್ತೇನೆಂದು ಹೇಳಿದ್ದರು. ಆದುದರಿಂದ ಮಹಾನಗರ ಪಾಲಿಕೆ ಎಂದರೆ ಕರ್ನಾಟಕ ರಾಜ್ಯದಲ್ಲಿ ಪ್ರಾಮುಖ್ಯವಾದಂತಹ ಒಂದು ವ್ಯವಸ್ಥೆ ಇದೆ. ಆದಷ್ಟು ಶೀಘ್ರವಾಗಿ ಈ ವರ್ಗಾವಣೆ ವಿಚಾರದಲ್ಲಿ ಯಾವ ಒತ್ತಡಕ್ಕೂ ಬಲಿಯಾಗದೆ ಬೇರೆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎ. ಸೋಮಣ್ಣ(ಬಿನ್ನಿಪೇಟೆ): ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದುದು. ಆದುದರಿಂದ ಇದು ಇಲ್ಲಿ ಚರ್ಚೆ ಮಾಡಿ ಬಗೆಹರಿಸುವ ಸಮಸ್ಯೆ ಅಲ್ಲ. ಮಾನ್ಯ ಎಂ. ಚಂದ್ರಶೇಖರ್‌ರವರು ಹಿಂದೆ ನಗರಾಭಿವೃದ್ಧಿ ಮಂತ್ರಿಗಳಾಗಿದ್ದಾಗ ಟ್ರಾನ್ಸ್‌ಫರ್ ಮಾಡಿದರು ಎನ್ನುವ ದೃಷ್ಟಿಯಿಂದ ಈ ಕೇಸ್ ಹೈಕೋರ್ಟ್‌ಗೆ ಹೋಗಿ ಸ್ಟೇ ತಂದರು. ತಾವು ಇದರ ವಿಚಾರವಾಗಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಸಲಹೆ ಸೂಚನೆಗಳನ್ನೊಳಗೊಂಡಂತೆ ವರದಿ ನೀಡಲು ಒಂದು ಉಪಸಮಿತಿಯನ್ನು ರಚಿಸಿದ್ದು, ಅದಕ್ಕೆ ಒಂದು ಟೈಂ ಬಾಂಡ್ ಮಾಡಿ ವರದಿ ಕೊಟ್ಟರೆ ಒಳ್ಳೆಯದು. ಇದನ್ನು ಬಗೆಹರಿಸುವಂತಹ ಪರಿಸ್ಥಿತಿಯಲ್ಲಿ ಅಧಿಕಾರಿಗಳು ಇಲ್ಲಿ ಇಲ್ಲ. ನಾನು ತಮ್ಮಮೂಲಕ ಕೇಳುವುದೇನೆಂದರೆ ಯಾವ ಈ ಒಂದು ಸಮಿತಿಯನ್ನು ಮಾಡಿದ್ದೀರಿ, ಆ ಸಮಿತಿ ಮೂರ್ನಾಲ್ಕು ತಿಂಗಳಲ್ಲಿ ವರದಿಯನ್ನು ನೀಡಿ ಈ ವರ್ಷದಲ್ಲಿ ಬದಲಾವಣೆ ಮಾಡುವುದರಿಂದ ಆಡಳಿತ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಸಹಾಯವಾಗುತ್ತದೆ. ಅದಕ್ಕೋಸ್ಕರ ಏನಾದರೂ ತೀಕ್ಷ್ಣವಾದ ಕ್ರಮವನ್ನು ಮಾನ್ಯ ಮಂತ್ರಿಗಳು ತೆಗೆದು ಕೊಳ್ಳಬೇಕೇವಿನಃ ಅಧಿಕಾರಿಗಳ ಮೇಲೆ ಬಿಟ್ಟರೆ ಇದರಿಂದ ಏನು ಪ್ರಯೋಜನವಾಗುವುದಿಲ್ಲ. ಏಕೆಂದರೆ ಎಲ್ಲಾ ಅಧಿಕಾರಿಗಳು ಅವರದೇ ಆದ ಕ್ಷೇಮವನ್ನು ನೋಡಿಕೊಳ್ಳುವ ಪರಿಸ್ಥಿತಿಯಲ್ಲಿ ಇದ್ದಾರೆ. ಆದುದರಿಂದ ಮಾನ್ಯ ಸಚಿವರು ತಾವೇ ಜವಾಬ್ದಾರಿಯಿಂದ ಈ ವರದಿಯನ್ನು ತರಿಸಿ ಕಾರ್ಯರೂಪಕ್ಕೆ ತರುವುದಕ್ಕೆ ತಿದ್ದುಪಡಿಯನ್ನು ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ದಿನೇಶ್ ಗುಂಡುರಾವ್(ಗಾಂಧಿನಗರ): ಮಾನ್ಯ ಅಧ್ಯಕ್ಷರೆ, ನಾವು ಹಿಂದೊಮ್ಮೆ ಇದರ ಬಗ್ಗೆ ಮಾತನಾಡಿದಾಗಲೂ ಕೂಡ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹಾಗೂ ಸಧ್ಯದಲ್ಲಿ ಮಾಡುತ್ತೇವೆಂದು ಹೇಳಿದ ಜಾಸನಸಭೆಯಲ್ಲಿ ಆಶ್ವಾಸನೆ ಕೊಟ್ಟಿದ್ದರು. ಆದರೂ ಇದು ಬಹಳ ತಡವಾಗುತ್ತಿದೆ. ಇದನ್ನು ಮಾಡಬೇಕೆಂದು ಸರ್ಕಾರಕ್ಕೆ ಮನಸ್ಸು ಬಂದರೆ ಖಂಡಿತವಾಗಿ ಮಾಡಬಹುದು. ಮಹಾನಗರ ಪಾಲಿಕೆಗಳು ಹಾಗೂ ಪೌರನಿಗಮಗಳಲ್ಲಿ ವರ್ಗಾವಣೆ ಮಾಡುವ ಅವಕಾಶ ಕಲ್ಪಿಸಬೇಕು. ಇದನ್ನು ಆದಷ್ಟು ಬೇಗ ಮಾಡಿದರೆ ಈ ಪಾಲಿಕೆ ಹಾಗೂ ನಿಗಮಗಳಲ್ಲಿ ಏನು ವ್ಯವಸ್ಥೆ ಇದೆ ಅದನ್ನು ಸರಿ ಮಾಡುವುದಕ್ಕೆ ಅವಕಾಶವಾಗುತ್ತದೆ. ವರ್ಗಾವಣೆ ಮಾಡಿದರೆ ಅಧಿಕಾರಿಗಳು ಹಿಡಿತಕ್ಕೆ ಸಿಗತಕ್ಕಂಥ, ಅಕೌಂಟಬಿಲಿಟಿ ಆಗತಕ್ಕಂಥ ವ್ಯವಸ್ಥೆ ಬರುತ್ತದೆ. ಆದುದರಿಂದ ತಮ್ಮ ಮೂಲಕ, ಸರ್ಕಾರದಲ್ಲಿ ಬಹಳ ವರ್ಷಗಳಿಂದ ಇದು ಆಗಬೇಕೆಂದು ಇದೆ, ಇದರ ಬಗ್ಗೆ ಈಗ ಇರುವ ಪ್ರಂದ ಹಾಗೂ ನೇಮಕಾತಿಯ ನಿಯಮಗಳಿಗೆ ತಿದ್ದುಪಡಿ ತಂದು ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಸನ್ಮಾನ್ಯ ಅಧ್ಯಕ್ಷರೆ, ಈ ಮೂಲಕ ಮಾನ್ಯ ಸದಸ್ಯರಿಗೆ ಸ್ಪಷ್ಟೀಕರಣಗೊಳಿಸುವುದೇನೆಂದರೆ, ಅಡಳಿತದಲ್ಲಿ ಸುಧಾರಣೆ ತರಬೇಕು, ಆದರಲ್ಲೂ ಈ ಮಹಾನಗರಪಾಲಿಕೆ, ಮುನಿಸಿಪಾಲಿಟಿ ಇತ್ಯಾದಿಗಳಲ್ಲಿ ನೌಕರರ ಮೇಲೆ ಸರ್ಕಾರದ ಹಿಡಿತ ಇರಬೇಕು ಎನ್ನುವುದರಲ್ಲಿ ಸರ್ಕಾರದ ಎರಡನೆಯ ಅಭಿಪ್ರಾಯವಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಂಡು ಒಂದು ಸಮಿತಿಯನ್ನು ರಚಿಸಿತ್ತು, ಅದು ತನ್ನ ವರದಿಯನ್ನು ಕೊಟ್ಟಿದೆ; ನೌಕರರ ವರ್ಗಾವಣೆಗೆ ಸಂಬಂಧಿಸಿದಂತೆ ಯಾವ್ಯಾವ ಕಾನೂನುಗಳನ್ನು ತಿದ್ದುಪಡಿ ಮಾಡಲಾಗಿದೆ., ಅದನ್ನು ಮುಂದಿನ ಅಧಿವೇಶನದಲ್ಲಿ ತಂದು ಸದನದ ಒಪ್ಪಿಗೆಯನ್ನು ಪಡೆಯುವ ಪ್ರಯತ್ನವನ್ನು ಮಾಡಲಾಗುವುದು. ನೌಕರರ ವರ್ಗಾವಣೆ ಬಗ್ಗೆ ಸರ್ಕಾರ ಆಸಕ್ತಿಯನ್ನು ಹೊಂದಿರುತ್ತದೆ. ಈ ಬಗ್ಗೆ ಎರಡನೇ ಮಾತಿಲ್ಲ.

ವಿಷಯ: (ಉ) ಕೊಪ್ಪಳ ಜಿಲ್ಲೆಯಲ್ಲಿ ಬೇವಿನ ಹಳ್ಳಿ ಗ್ರಾಮದ ರೈತರು ಹಾಗೂ ಸಾರ್ವಜನಿಕರು ಕಿರ್ಲೋಸ್ಕರ್ ಫ್ಯಾಕ್ಟರಿಯಿಂದ ಬರುವ ಹೊಗೆ ಮತ್ತು ಕಬ್ಬಿಣದ ಅದಿರಿನ ತುಣುಕಿನಿಂದ ಆರೋಗ್ಯಕ್ಕೆ ಹಾನಿಯಾಗಿರುವ ಬಗ್ಗೆ.

ಶ್ರೀ ಸಂಗಣ್ಣ ಅಮರಪ್ಪ ಕರಡಿ(ಕೊಪ್ಪಳ): ಮಾನ್ಯ ಅಧ್ಯಕ್ಷರೇ, ಮಾನ್ಯ ಪರಿಸರ ಅರಣ್ಯ ಹಾಗೂ ಜೀವಿಶಾಸ್ತ್ರ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

+ ಶ್ರೀ ಕೆ.ಹೆಚ್. ರಂಗನಾಥ್(ಮಾನ್ಯ ಅರಣ್ಯ ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು): ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ. ಮೆ: ಕಿರ್ಲೋಸ್ಕರ್ ಫೆರಸ್ ಕಾರ್ಖಾನೆ, ಸರ್ವೆ ನಂ.61 ರಿಂದ 78:2, ಬೇವಿನಹಳ್ಳಿ ಗ್ರಾಮದಲ್ಲಿ 1994ರಲ್ಲಿ ಸ್ಥಾಪನೆಗೊಂಡಿದೆ. ಈ ಘಟಕವು PIG IRON ಮತ್ತು CAST IRON ತಯಾರಿಸುವ ಉದ್ದಿಮೆಯಾಗಿದ್ದು, 2,40,000 ಮತ್ತು 30,000 TP/A ಉತ್ಪಾದನೆ ಮಾಡುವ ಸಾಮರ್ಥ್ಯ ಹೊಂದಿರುತ್ತದೆ. ಮುಖ್ಯವಾದ ಕಚ್ಚಾವಸ್ತುಗಳು ಕಬ್ಬಿಣದ ಅದಿರು, ಸುಣ್ಣದ ಕಲ್ಲು ಬೆಣಚು ಕಲ್ಲು ಕೋಕ್ ಮತ್ತು ಡೋಲಾಮೈಟ್ಸ್‌ಗಳು ಈ ಉದ್ದಿಮೆಯ